ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ ಮತ್ತು ಕೆಲವು ಕಡೆ ಅಲ್ಲಲ್ಲಿ ಆಯಿಲ್ ಪಂಪುಗಳನ್ನು ಹಾಕಿಕೊಂಡಿರುತ್ತಾರೆ ಅಂಥ ಕಡೆ ಹತ್ತಿರದಲ್ಲಿರುವ ಪೈರ್‌ನಿಂದ ಕನ್‌ಕ್ಷನ್ ಕೊಡಿಸಿ ಕೊಟ್ಟು ಎಲೆಕ್ಟ್ರಿಫಿಕೇಷನ್ ಕೆಲಸ ಮಾಡಿಕೊಡಬೇಕಾಗುತ್ತದೆ ಈ ಕೆಲಸಗಳಿಗೆ ಎನ್‌ಆರ್‌ಡಬ್ಲ್ಯು ಸ್ಕೀಂನಲ್ಲಾದರೂ ಹಣ ಒದಗಿಸಿ ಆ ಜನಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಹೇಳಿರತಕ್ಕಂಥಾ ಸಲಹೆಗಳು ಆ ಊರಿನ ಅಭಿವೃದ್ಧಿ ಬಗ್ಗೆ ಹೇಳಿದ್ದಾರೆ. ಅದು ಒಳ್ಳೆಯದು, ಆ ಬಗ್ಗೆ ಸರ್ಕಾರ ನಿಗಾ ಕೊಟ್ಟು ಅದನ್ನು ಮಾಡಿಕೊಡಲಾಗುತ್ತದೆ.

ಶ್ರೀ ಎಸ್. ಪೈ. ಪಾಟೀಲ್.—ಸ್ವಾಮಿ, ದೇವರ್‌ಹಿಪ್ಪರ್ಗಿನಲ್ಲಿ ಒಂದು ಟ್ರಕ್ ಇದೆ. ಅದು 3 ಊರುಗಳಿಗೆ ಸಪ್ಲೈ ಆಗಬೇಕಾಗುತ್ತದೆ, ಅದು 15 ದಿವಸವೂ ಕೂಡ ಸರಿಯಾಗಿ ಕೆಲಸ ಮಾಡುವುದಿಲ್ಲ. ಆದುದರಿಂದ ದೇವ್‌ಪೂರ್ ಮತ್ತು ಮಾನೂರ್‌ಗೆ ಸಪರೇಟ್ ಆಗಿ ಒಂದೊಂದು ಟ್ರಕ್ ಅನ್ನು ಕೊಡಿಸಿಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಅದನ್ನು ಯೋಚನೆ ಮಾಡೋಣ.

(ii) re: Forcible occupation of borewell by Rekulgi village Panchayat Chairman, Bidar District.

ಶ್ರೀ ವಿ.ಎನ್. ಪಾಟೀಲ್(ಹುಮ್ನಾಬಾದ್),—ಅಧ್ಯಕ್ಷರೇ, ಬೀದರ್ ತಾಲ್ಲೂಕಿನ ರೆಕುಲ್ಗಿ ಗ್ರಾಮದ ಗ್ರಾಮಪಂಚಾಯಿತಿಯ ಅಧ್ಯಕ್ಷರು ಬಲಾತ್ಕಾರದಿಂದ ಕೊಳವೆ ಬಾವಿಯನ್ನು ಆಕ್ರಮಿಸಿಕೊಂಡಿರುವ ವಿಚಾರದ ಬಗ್ಗೆ ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ಯದ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

SRI K. PRABAKAR(Minister for Rural Development and Panchayat Raj).—I wish to make the following statement.—

It is a fact that a Bore well was sunk in Rekulgi village, Bidar Taluk, for drinking water purpose. This Bore well was sunk in S.No. 84 belonging to one Sri Shama Rao Patil, Chairman Village Panchayat Rekulgi during the last drought period, by the Public Health Engineering Department. It is stated that this Bore well is not in order and in disuss for the last one and half year and requires repairs. There is a grape cultivation developed around the bore well by the Chairman Village Panchayat, Rekulgi and for irrigting this grape yard, water from a well situated in land i.e Survey No. 227 is being used The Deputy Commissioner, Bidar, has stated that the Harijans are using drinking water from public wells in Rekulgi village and that no complaints either from the Harijans or from the Christians who are living in the village have been received about any obstruction caused by other class of people in the village for taking drinking water from public wells. The Chief Engineer HI and PHE Bangalore has been intimated to see that the bore well sunk in the village is repaired immediately and put into public use.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸಚಿವರು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಎರಡು ಮೂರು ಪ್ರಾಮುಖ್ಯವಾದಂಥ ವಿಷಯಗಳನ್ನು ಒಪ್ಪಿಕೊಂಡಿದ್ದಾರೆ. ಒಂದು, ಸರ್ಕಾರ ತನ್ನ ಸ್ವಂತ ದುಡ್ಡಿನಿಂದ ಕೊಳವೆ ಬಾವಿ ತೆಗೆಸಿದ್ದು, ಎರಡು, ಆ ಕೊಳವೆ ಬಾವಿ ಕಳೆದ ಒಂದೂವರೆ ವರ್ಷ

ಇಂದ ಉಪಯೋಗವಾಗದೆ ಇರುವುದು, ಮೂರು ಆ ಬಾವಿಯ ಸುತ್ತಮುತ್ತಲು ಈಗ ಹೊಸದಾಗಿ ಗ್ರೇಪ್ ಗಾರ್ಡನನ್ನು ಅಲ್ಲಿಯ ವಿಲೇಜ್ ಪಂಚಾಯತ್ ಚೇರ್‌ಮನ್ ಅವರು ಬೆಳೆಸಿರುವುದಲ್ಲದೆ ಆ ಬಾವಿಯನ್ನು ತಮ್ಮ ತೋಟದಲ್ಲಿಯೇ ಸೇರಿಸಿ ಕೊಂಡಿದ್ದಾರೆ. ಇದರಿಂದ ಬೇರೆಯವರು ಅದರ ನೀರನ್ನು ಉಪಯೋಗ ಮಾಡಲು ಸಾಧ್ಯವಾಗುತ್ತಿಲ್ಲ. ಆದರೆ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹರಿಜನರು ಮತ್ತು ಆ ಗ್ರಾಮದ ಬೇರೆ ವರ್ಣದ ಜನರಿಂದ ನೀರು ಸಿಗದಿರುವ ಬಗ್ಗೆ ಅಲ್ಲಿಯ ಡಿ.ಸಿ. ಅವರಿಗೆ ಯಾವ ಕಂಪ್ಲೈಂಟ್ಸ್ ಬಂದಿಲ್ಲವೆಂದು ಹೇಳಿದ್ದಿರಿ. ಈ ವರಿಧಿ ಸರಿಯಲ್ಲ ಹರಿಜನರಿಗಾಗಿ ತೆಗೆಸಿದ ಬಾವಿಯ ಸುತ್ತಮುತ್ತ ವಿಲೇಜ್ ಪಂಚಾಯತ್ ಚೇರ್‌ಮನ್ ಗ್ರೇಪ್ ವಾರ್ಡನ್ ಬೆಳೆಸಿದ್ದಾರೆ. ಇದರಿಂದ ಆ ಬಾವಿಯ ನೀರನ್ನು ಉಪಯೋಗ ಮಾಡಲು ಸಾಧ್ಯವಾಗುತ್ತಿಲ್ಲ. ಈ ಬಾವಿ ಇರತಕ್ಕ ಜಾಗ ಕಾಲು ಎಕರೆ ಆಗಬಹುದು. ಆದಕಾರಣ ಆ ಜಾಗವನ್ನು ಸರ್ಕಾರದವರೇ ಸ್ವಾಧೀನ ಪಡಿಸಿಕೊಂಡು ಆ ಬಾವಿ ನೀರಿನ ಉಪಯೋಗ ಎಲ್ಲ ಜನರಿಗೂ ಆಗುವಂತೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್ — ಈಗ ನಮ್ಮ ಮುಂದಿರುವ ವರದಿಯ ಪ್ರಕಾರ ಅಲ್ಲಿಯ ಜನರಿಗೆ ನೀರಿನ ತೊಂದರೆ ಇಲ್ಲವೆಂದು ಕಂಡುಬರುತ್ತದೆ. ಆದರೆ ಮಾನ್ಯ ಸದಸ್ಯರು ಆ ಬಾವಿ ಬೇರೆಯವರ ಜಮೀನಿನಲ್ಲಿರುವುದರಿಂದ ಆ ಜಾಗವನ್ನು ಸ್ವಾಧೀನಪಡಿಸಿಕೊಂಡು, ಆ ಬಾವಿಯನ್ನು ರಿಪೇರಿ ಮಾಡಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಕೊಡುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಮತೊಮ್ಮೆ ಕೂಲಂಕಷವಾಗಿ ಪರಿಶೀಲನೆ ಮಾಡುವಂತೆ ತಿಳಿಸುತ್ತೇನೆ ಮತ್ತು ಆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾದ ಅಗತ್ಯವಿದ್ದರೆ ಆ ಕೆಲಸವನ್ನು ಸಹ ಬೇಗ ಮಾಡಿ ಎಂದು ನಾನು ಅವರಿಗೆ ಸಲಹೆ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಬೀದರ್ ಡಿ.ಸಿ. ಅವರು ಏನು ಬರೆದಿದ್ದಾರೆ, ಅದನ್ನು ಇಲ್ಲಿ ನಾವು ಹೇಳಿದ್ದೀರಿ. ಇದರಲ್ಲಿ ಕುಡಿಯುವ ನೀರಿನ ತೊಂದರೆ ಇಲ್ಲವೆಂದು ಒಂದು ಕಡೆ ಹೇಳಿದ್ದರೆ, ಇನ್ನೊಂದು ಕಡೆ ಕೊಳವೆ ಬಾವಿ ಕೆಟ್ಟು ಹೋಗಿದೆ ಎಂದು ಹೇಳಿದ್ದೀರಿ. ಜೊತೆಗೆ ಮಾನ್ಯ ಸದಸ್ಯರು ಹರಿಜನರಿಗೆ ನೀರನ್ನು ಸೇದಲು ಬಿಡುತ್ತಿಲ್ಲವೆಂದು ಏನು ಹೇಳಿದ್ದಾರೆ ಆ ಬಗ್ಗೆ ತಾವು ಏನನ್ನೂ ಇದರಲ್ಲಿ ಹೇಳಿಲ್ಲ. ಮತ್ತು ಈ ವಿಚಾರದಲ್ಲಿ ಡಿ. ಸಿ. ಅವರಿಗೆ ಕಂಪ್ಲೈಂಟ್ಸ್ ಬಂದಿಲ್ಲವೆಂದು ಹೇಳಿರಾಗಿದೆ. ಯಾವ ಆಧಾರದ ಮೇಲೆ ಕಂಪ್ಲೈಂಟ್ಸ್ ಬಂದಿಲ್ಲವೆಂಬ ಬಗ್ಗೆ ಮತ್ತು ನಿಜ ಸಂಗತಿ ಏನು ಎಂಬ ಬಗ್ಗೆ ಮತೊಮ್ಮೆ ಪೂರ್ಣವಾಗಿ ತನಿಖೆ ಮಾಡಿಸಿ ಹರಿಜನರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಹೇಳಿದಂತೆ ಎರಡೂ ದೃಷ್ಟಿಯಿಂದ ಇದನ್ನು ಮತ್ತೆ ಪರಿಶೀಲನೆ ಮಾಡಿಸಿ ಹರಿಜನರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಿಕೊಡುತ್ತೇವೆ.

(*iii*) *re:— Extending time limit for passing departmental examination by Government Servants.*

SRI M. B. RAMASWAMY (Anekal).—Sir I call the attention of the Chief Minister to a matter regarding the necessity of extending the timelimit for passing the Departmental Tests by Government employees.

SRI H. M. CHANNABASAPPA (Minister for Health).—On behalf of Chief Minister, Sir I wish to make the following Statement

The Karnataka State Civil Service (Service and Kannada Language Examinations) Rules, 1974 came into force from 10-1-74. In brief, the rules provide that the Government servants shall pass the examin